# ಚರ್ಮರೋಗ ಶುಶ್ರೂಷೆಗೆ ಪ್ರತ್ಯೇಕ ನರ್ಸಿಂಗ್ ವಿಭಾಗ ಅಗತ್ಯ

ಕಾಸರಗೋಡು:

ಇನ್ಸ್‌ಟಿಟ್ಯೂಟ್ ಓಫ್ ಅಪ್ಲೈಡ್ ಡರ್ಮಟೋಲಜಿ ಆಶ್ರಯದಲ್ಲಿ ಕಾಸರಗೋಡು ನಗರದಲ್ಲಿ ಜರಗುತ್ತಿರುವ ಅಂತಾರಾಷ್ಟ್ರಿಯ ವಿಚಾರ ಕಮ್ಮಟ 01.12.2009ರಂದು ಮೂರನೇ ದಿನಕ್ಕೆ ಕಾಲಿರಿಸಿದೆ. ವಿಶ್ವ ಏಡ್ಸ್ ದಿನದ ಅಂಗವಾಗಿ ಬೆಂಗಳೂರಿನ ಕರ್ನಾಟಕ ಹೆಲ್ತ್ ಪ್ರೊಮೋಷನ್ ಟ್ರಸ್ಟ್ ಉಪ ನಿರ್ದೇಶಕ ಡಾ। ಕೆ.ಎಚ್.ಪ್ರಕಾಶ್ ಇವರು ಲಂಡನ್ ಬರ್ನ್‌ಮೌತ್ ವಿಶ್ವವಿದ್ಯಾನಿಲಯದ ಡಾ। ಸ್ಟೀವನ್ ಇರ್ಸರ್ ಎದೆಯ ಮೇಲೆ ಕೆಂಪು ರಿಬ್ಬನ್ ಲಗತ್ತಿಸಿ ಪ್ರತಿನಿಧಿಗಳಲ್ಲಿ ಏಡ್ಸ್ ಕುರಿತಾದ ಜಾಗೃತಿ ಮೂಡಿಸಿದರು.

ಪ್ರಥಮ ಸೆಷನ್‌ನಲ್ಲಿ ಪ್ರೊ।ರೆಯಾನ್ ಚರ್ಮರೋಗ ಚಿಕಿತ್ಸೆಯಲ್ಲಿ ದಾದಿಯರ ಪಾತ್ರ ಮತ್ತು ಅದರ ಅಗತ್ಯದ ಬಗ್ಗೆ ವಿವರಿಸಿದರು. ಡಾ। ವಿಜಯಾ ಆಯುರ್ವೇದ ನರ್ಸಿಂಗ್ ಕುರಿತಾಗಿ ವಿವರಿಸಿದರು. ಪೊಯಿನಾಚಿಯಲ್ಲಿರುವ ಸೆಂಚುರಿ ಕಾಲೇಜ್ ಓಫ್ ನರ್ಸಿಂಗ್ ಉಪ ಪ್ರಾಂಶುಪಾಲೆ ಡಾ। ಸ್ಮಿತಾ ಅವರು ವೈದ್ಯಕೀಯ ನರ್ಸಿಂಗ್ ಬಗ್ಗೆ ಭಾರತದಲ್ಲಿ ಜರಗಿದ ಸಂಶೋಧನೆಗಳ ಮೇಲೆ ಬೆಳಕು ಹಾಯಿಸಿದರು.

ಆಯುರ್ವೇದ ನರ್ಸಿಂಗ್ ಮತ್ತು ವಿವಿಧ ಚರ್ಮರೋಗ ಚಿಕಿತ್ಸೆಯ ಕುರಿತು ಹಾಸನ ಎಸ್.ಡಿ.ಎಂ ಆಯುರ್ವೇದ ಕಾಲೇಜಿನ ಡಾ। ಟಿ.ಡಿ.ತ್ರಿಪಾಠಿ, ಉಡುಪಿ ಎಸ್.ಡಿ.ಎಂ ಆಯುರ್ವೇದ ಕಾಲೇಜಿನ ಡಾ। ಸುಪ್ರಿಯಾ ಪ್ರಭು, ಪ್ರಬಂಧ ಮಂಡಿಸಿದರು. ಚರ್ಮರೋಗ ಶುಶ್ರೂಷೆಯ ವಿವಿಧ ಆಯಾಮಗಳ ಬಗ್ಗೆ ಮಣಿಪಾಲ ಮಾಹೆ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಡಾ। ಕಾಮತ್ ಮಧುಸೂದನ ಹಾಗೂ ಎಚ್.ಐ.ವಿ/ಏಡ್ಸ್ ಬಗ್ಗೆ ಮಂಗಳೂರು ಫಾದರ್ ಮುಲ್ಲರ್ಸ್ ಕಾಲೇಜಿನ ಡಾ।ಜ್ಯೋತಿಲಾಲ್ ಪ್ರತ್ಯೇಕ ಪ್ರಬಂಧಗಳನ್ನು ಮಂಡಿಸಿದರು.

ಚರ್ಮರೋಗ ನರ್ಸಿಂಗ್ ಅಧ್ಯಯನದಲ್ಲಿ ನೂತನ ಪಠ್ಯಕ್ರಮ ಅಳವಡಿಕೆ, ಒಳಗೊಳ್ಳಬೇಕಾದ ವಿವಿಧ ವಿಚಾರಗಳ ಬಗ್ಗೆ ಮುಂದಿನ ಸೆಷನ್‌ನಲ್ಲಿ ಡಾ।ಕೊಚ್ಚು ತ್ರೇಸಿಯಮ್ಮ, ಡಾ।ಎಸ್.ಆರ್.ನರಹರಿ, ಡಾ।ಲಕ್ಷ್ಮಿ.ವಿ.ನಾಯರ್, ಪ್ರೊ। ಟಿ.ಜೆ ರೆಯಾನ್ ಹಾಗೂ ಪ್ರೊ।ಸ್ಟೀವನ್ ಇರ್ಸರ್ ಚರ್ಚಿಸಿ ಆಶಯಗಳನ್ನು ರೂಪಿಸಿದರು. ಡಾ।ಲೀನಾ ಕೆ.ಸಿ, ಡಾ।ಪ್ರಸನ್ನ ಮಿತ್ರ, ಡಾ।ನಾರಾಯಣ ಪ್ರದೀಪ, ಡಾ। ಪ್ರಕಾಶ್ ಹಾಗೂ ಪ್ರೊ।ರಾಮನ್ ಏಡ್ಸ್ ಮತ್ತು ಟ್ಯೂಬರ್‌ಕ್ಯುಲೋಸಿಸ್ ಸಂಬಂಧದ ಕುರಿತಾಗಿ ಪ್ರತ್ಯೇಕ ಸೆಷನ್ ನಡೆಸಿ ಚಿಕಿತ್ಸಾ ವಿಧಾನಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ಸಂಯೋಜಿತ ಚರ್ಮ ಚಿಕಿತ್ಸಾ ಪದ್ಧತಿಯಲ್ಲಿ ಆಯುರ್ವೇದ ನರ್ಸಿಂಗ್ ವಿಭಾಗದ ಕೊಡುಗೆಯ ಬಗ್ಗೆ ಡಾ। ಗುರುಪ್ರಸಾದ ಅಗ್ಗಿತ್ತಾಯ, ಡಾ। ಸುಶ್ಮಾ, ಡಾ।ವಿಜಯಾ ಇವರು ಪ್ರೊ।ಟಿ.ಜೆ ರೆಯಾನ್ ಸಮ್ಮುಖದಲ್ಲಿ ಪ್ರಬಂಧಗಳನ್ನು ಮಂಡಿಸಿದರು.

ಮೂರು ದಿನಗಳ ಕಮ್ಮಟದಲ್ಲಿ ಮೂಡಿ ಬಂದ ವಿವಿಧ ವಿಚಾರಗಳ ಆಧಾರದಲ್ಲಿ ಡಾ।ಕೊಚ್ಚುತ್ರೇಸಿಯಮ್ಮ ಥೋಮಸ್ ಅವರ ಉಪಸ್ಥಿತಿಯಲ್ಲಿ ಚರ್ಮ ರೋಗ ಚಿಕಿತ್ಸಾ ಕ್ಷೇತ್ರದಲ್ಲಿ ನರ್ಸಿಂಗ್ ಪ್ರಾತಿನಿಧ್ಯದ ಬಗ್ಗೆ ಆಶಯಗಳನ್ನು ರೂಪೀಕರಿಸಲಾಯಿತು.

*******************